ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1709 (2426)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲೆಗಳಿಗೆ ಕಡಿಮೆ ಅಂದರೆ 2 ಜನ ಅಧ್ಯಾಪಕರು ಇರಲೇಬೇಕೆಂಬ ರೀತಿ ಇದೆಯೇ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಜನ ಅಧ್ಯಾಪಕರಿಲ್ಲದ ಶಾಲೆಗಳೆಷ್ಟು;

ಇ) ಕರಿ ಹಲಗೆ ಯೋಜನೆಯಲ್ಲಿ 2 ಜನ ಅಧ್ಯಾಪಕರನ್ನಿಟ್ಟು ಉಳಿದ ಶಾಲೆಗಳಿಗೆ ಎರಡು ಜನ ಅಧ್ಯಾಪಕರು ಇರಬೇಕೆಂಬ ನೀತಿಯನ್ನು ಅನುಸರಿಸದಿರಲು ಕಾರಣವೇನು?

ಈ)ನಿಯುಕ್ತಿಯ ಮೇಲೆ ಎಷ್ಟು ಜನ ಅಧ್ಯಾಪಕರು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; (ಸಂಪೂರ್ಣ ವಿವರವನ್ನು ಒದಗಿಸುವುದು);

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ)ಕಪ್ಪು ಹಲಗೆ ಕಾರ್ಯಕ್ರಮದ ಯೋಜನೆಯಡಿ ಆಳವಡಿಸಲಾಗಿರುವ ಶಾಲೆಗಳಲ್ಲಿ ಮಾತ್ರ ಕನಿಷ್ಟ 2 ಶಿಕ್ಷಕರು ಇರಬೇಕೆಂಬ ನಿಯಮ ಇದೆ.

ಆ) 48.

ಇ) ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆವಶ್ಯಕತೆ ಇದ್ದಷ್ಟು ಶಿಕ್ಷಕ ಹುದ್ದೆ ಮಂಜೂರಾಗದೆ ಇರುವುದರಿಂದ 2 ಜನ ಶಿಕ್ಷಕರಿರಲೇಬೇಕೆಂಬ ನೀತಿಯನ್ನು ಅನುಸರಿಸಲು ಸಾಧ್ಯವಾಗಿಲ್ಲ.

ಈ) 93 ಶಿಕ್ಷಕರು ನಿಯುಕ್ತಿಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

1. ಮಂಗಳೂರು ತಾ.	:	08
2. ಮಂಗಳೂರು ನಗರ	:	-
3. ಬಂಟ್ವಾಳ ತಾ.	:	09
4. ಬೆಳ್ತಂಗಡಿ ತಾ.	:	04
5. ಪುತ್ತೂರು ತಾ.	:	23
6. ಸುಳ್ಯ ತಾ:	:	30
7. ಉಡುಪಿ ದಕ್ಷಿಣ	:	01
8. ಉಡುಪಿ ಉತ್ತರ	:	02
9. ಕಾರ್ಕಳ ದಕ್ಷಿಣ	:	-
10. ಕಾರ್ಕಳ ಉತ್ತರ	:	04
11. ಕುಂದಾಪುರ ತಾ:	:	12

ವಿಷಯ:- ಕುಂದಾಪುರ ತಾಲ್ಲೂಕಿನ ಜ್ಯೂನಿಯರ್ ಕಾಲೇಜು ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1711 (2428)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಎಷ್ಟು ಜೂನಿಯರ್ ಕಾಲೇಜುಗಳಿವೆ (ವಿವರ)

ಆ) ಕೊಠಡಿಗಳ ಕೊರತೆ ಇರುವ ಕಾಲೇಜುಗಳು ಎಷ್ಟು (ಹೆಸರು ಮತ್ತು ವಿವರವನ್ನು ಒದಗಿಸುವುದು)

ಇ) ಕುಂದಾಪುರ ಪದವಿ ಪೂರ್ವ ಕಾಲೇಜಿನ ಕಟ್ಟಡ ಅರ್ಧದಲ್ಲಿ ನಿಲ್ಲಲು ಕಾರಣವೇನು

ಈ) ಇದನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 11 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ.

ವಿವರ :

1. ಕುಂದಾಪುರ	2. ಶಂಕರನಾರಾಯಣ
3. ತೆಕ್ಕಟ್ಟೆ	4. ನಾವುಂದ
5. ಉಪ್ಪುಂದ	6. ವಂಡ್ಸೆ
7. ಕೋಟೇಶ್ವರ	8. ಕಂಬದಕೋಣೆ
9. ಬೈಂದೂರು	10. ಬಿದ್ಕಲ್‌ಕಟ್ಟೆ
11. ಹೊಸಂಗಡಿ	

ಆ. ಮೂರು.

1. ಸರ್ಕಾರಿ ಪದವಿ ಪೂರ್ವ ಕಾಲೇಜು
ಬೈಂದೂರು- 3ಕೊಠಡಿಗಳ ಕೊರತೆ

2. ಸರ್ಕಾರಿ ಪದವಿಪೂರ್ವ ಕಾಲೇಜು
ನಾವುಂದ - 2 ಕೊಠಡಿಗಳ ಕೊರತೆ

3. ಸರ್ಕಾರಿ ಪದವಿ ಪೂರ್ವ ಕಾಲೇಜು
ಉಪ್ಪುಂದ- 1 ಕೊಠಡಿಯ ಕೊರತೆ

ಇ) ಮೊದಲನೆ ಟೆಂಡರ್ ಕಾಮಗಾರಿಯಿಂದ ನೆಲ ಅಂತಸ್ತಿಗೆ ಭಾವಣ ಹಾಕಲಾಗಿದೆ. ಎರಡನೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆಯಲಾಗಿದೆ.

ಈ) ಹೌದು.

ವಿಷಯ:- ಹಾಸನ ಜಿಲ್ಲೆಯಲ್ಲಿ ಮಲೇರಿಯಾ ಬಗ್ಗೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1714 (2416)

ಶ್ರೀ ಬಿ. ಶಿವರಾಮ್ (ಗಂಡಸಿ ಕ್ಷೇತ್ರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ 1994-95, 1995-96 ರಲ್ಲಿ ಮಲೇರಿಯಾ ರೋಗಕ್ಕೆ ತುತ್ತಾಗಿರುವವರ ಸಂಖ್ಯೆ ಎಷ್ಟು? ಮತ್ತು ರೋಗಕ್ಕೆ ತುತ್ತಾಗಿ ಸತ್ತಿರುವವರ ಸಂಖ್ಯೆ ಎಷ್ಟು?